## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ರವರು ನಿಯಮ 330ಎ ಅಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ

**ಪ್ರಶ್ನೆ:**

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಬಿಳಿಕೆರೆ ಹೋಬಳಿ ದಾಸನಪುರ ಗ್ರಾಮದ ವಿದ್ಯಾರ್ಥಿಯೊಬ್ಬ ಅನುಮಾನಸ್ಪದವಾಗಿ ಮೃತಪಟ್ಟಿರುವ ಘಟನೆ ಕುರಿತು ಕನ್ನಡಪ್ರಭ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಮುತ್ತುರಾಜ್ ಎನ್ನುವ ಮೃತ ದುರ್ದೈವಿ ರತ್ನಪುರಿಯ ಸರ್ಕಾರಿ ಪಿಯು ಕಾಲೇಜಿನಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದ. ಕಾಲೇಜಿನಲ್ಲಿ ಪರೀಕ್ಷೆ ಬರೆದು ತನ್ನೂರಿಗೆ ವಾಪಸಾಗುವ ವೇಳೆ ಅನ್ಯಕೋಮಿನ ಹುಡುಗರ ಒಂದು ತಂಡ ರತ್ನಪುರಿಯಿಂದ ಗದ್ದಿಗೆಗೆ ತೆರಳುವ ಮಾರ್ಗದಲ್ಲಿ ಅಡ್ಡಹಾಕಿ ಈತನನ್ನು ಮನಬಂದಂತೆ ಥಳಿಸಿದ್ದು, ಈತನ ದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿರುವುದು ತಡವಾಗಿ ಬೆಳಕಿಗೆ ಬಂದಿರುತ್ತದೆ.

ತಡವಾಗಿ ವಿಷಯ ತಿಳಿದ ಈತನ ತಂದೆ ತಮ್ಮ ಜಮೀನಿನ ಶೆಡ್‌ನಲ್ಲಿ ದೊರೆತ ಮಗನ ದೇಹವನ್ನು ಕಂಡು ಆಘಾತಗೊಂಡಿದ್ದು, ತಮ್ಮ ಪುತ್ರನ ಅನುಮಾನಾಸ್ಪದ ಸಾವಿನ ಬಗ್ಗೆ ತನಿಖೆ ನಡೆಸುವಂತೆ ಹಾಗೂ ಹಲ್ಲೆ ನಡೆಸಿದ ಅನ್ಯಕೋಮಿನ ಹುಡುಗರನ್ನು ಬಂಧಿಸುವಂತೆ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ಎಫ್.ಐ.ಆರ್ ದಾಖಲಿಸಿಕೊಂಡ ಪೊಲೀಸರು ಎರಡು ದಿನ ಕಳೆದರೂ ಆರೋಪಿಗಳನ್ನು ಬಂಧಿಸದ ಕಾರಣ, ಮೃತದೇಹದ ಆಂಬ್ಯುಲೆನ್ಸ್ ಹೊತ್ತ ವಾಹನದ ಮುಂದೆ ಇಡೀ ಗ್ರಾಮಸ್ಥರು ರಸ್ತೆ ತಡೆ ಪ್ರತಿಭಟನೆ ನಡೆಸಿರುತ್ತಾರೆ, ಈ ಪ್ರತಿಭಟನೆಯಲ್ಲಿ ಹಿಂದೂಪರ ಸಂಘಟನೆಗಳೂ ಸಹ ಭಾಗವಹಿಸಿ ಆರೋಪಿಯನ್ನು ಬಂದಿಸುವಂತೆ ಒತ್ತಾಯಿಸಿರುತ್ತಾರೆ,

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ತರುವಾಯ ಉದ್ದೇಶಪೂರ್ವಕ ಹಲ್ಲೆ, ಅನುಮಾನಾಸ್ಪದ ಸಾವಿನ ಪ್ರಕರಣಗಳು, ಪದೇ ಪದೇ ವರದಿಯಾಗುತ್ತಿದ್ದು, ಸರ್ಕಾರ ಈ ವಿಚಾರದ ಬಗ್ಗೆ ಸೂಕ್ತ ತನಿಖೆಗೆ ಆದೇಶ ನೀಡಬೇಕು, ತಪ್ಪಿತಸ್ಥರನ್ನು ಬಂಧಿಸಬೇಕು, ಮೃತ ವಿದ್ಯಾರ್ಥಿ ಕುಟುಂಬಕ್ಕೆ ಗರಿಷ್ಠ ಪರಿಹಾರವನ್ನು ಪ್ರಕಟಿಸಬೇಕೆಂಬ ಕುರಿತು.

**ಉತ್ತರ:**

ದಿನಾಂಕ: 19.02.2024 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ಪಿರ್ಯಾದಿಯವರಾದ ಶ್ರೀ. ರವಿಕುಮಾರ ಬಿನ್ ತುರುಮಲೇಗೌಡ, ದಾಸನಪುರ ಗ್ರಾಮ, ಹುಣಸೂರು ತಾಲ್ಲೂಕು ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ನನಗೆ ಇಬ್ಬರು ಮಕ್ಕಳು. 01ನೇ ಮುತ್ತುರಾಜ ಎಂಬ ಗಂಡು ಮಗ ಮತ್ತು 02ನೇ ಜೀವಿತಾ ಎಂಬ ಹೆಣ್ಣು ಮಗಳು ಇರುತ್ತಾರೆ. ನನ್ನ ಮಗ ಮುತ್ತುರಾಜ ರತ್ನಪುರಿ ವಿ.ಎಸ್.ಎಸ್.ಎನ್ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡಿ ಕೊಂಡಿದ್ದನು, ದಿನಾಂಕ: 19.02.2024 ರಂದು ಬೆಳಿಗ್ಗೆ 9 ಗಂಟೆಗೆ ಎಂದಿನಂತೆ ನನ್ನ ಮಗ ಮುತ್ತುರಾಜ್ ಕಾಲೇಜಿಗೆ ಹೋಗುವುದಾಗಿ ಹೇಳಿ ಹೋಗಿದ್ದನು. ನಂತರ ಮಧ್ಯಾಹ್ನ 2.00 ಗಂಟೆಗೆ ಕಾಲೇಜಿನಿಂದ ವಾಪಾಸ್ ಬಂದಿದ್ದು ನಮ್ಮೂರಿನ ಭಾಗ್ಯಮ್ಮಳ ಮಗಳು ಮಮತಾ ರವರ ಗೃಹ ಪ್ರವೇಶದ ಪಂಕ್ಷನ್ ನಲ್ಲಿ ಊಟ ಬಡಿಸುತ್ತಿದ್ದನು. ನಂತರ ನಾನು ರತ್ನಪುರಿ ಜಾತ್ರೆಗೆ ಬಂದೆನು. ರತ್ನಪುರಿಯ ಜಾತ್ರೆಯಲ್ಲಿ ನಮ್ಮೂರಿನ ರಾಜು ಎಂಬುವವರು ಸಿಕ್ಕಿದ್ದು ಮುತ್ತುರಾಜನಿಗೆ ಯಾರೋ ಮುಸ್ಲಿಂ ಹುಡುಗರು ಗಲಾಟೆ

ಮಾಡಿದ್ದಾರಂತೆ ಎಂದು ಹೇಳಿದನು. ಆಗ ನಾನು ತಕ್ಷಣ ನನ್ನ ಮಗನನ್ನು ಹುಡುಕಿ ಕೊಂಡು ಹಾಸ್ಟೆಲ್ ಬಳಿ ಹೋಗಿದ್ದು, ಅಲ್ಲಿದ್ದ ಮುಸ್ಲಿಂ ಹುಡುಗರಾದ ಅಸ್ನೇನ್ ಪಾಷ ಮತ್ತಿತರರು ನನ್ನ ಮಗನು ಬಳಸುತ್ತಿದ್ದ ಮೊಬೈಲ್ ಫೋನ್ ಅನ್ನು ಎಸೆದು ಹೊರಟು ಹೋದರು.

ನಂತರ ನಾನು ಗಾಬರಿಯಿಂದ ನನ್ನ ಮಗನನ್ನು ಹುಡುಕುತ್ತಾ ಕಾಲುವೆ ಏರಿಕಡೆ ಹೋಗಿ ಹುಡುಕಲಾಗಿ ಎಲ್ಲಿಯೂ ಕಾಣಲಿಲ್ಲ. ನಂತರ ನಾನು ನನ್ನ ಮಗನನ್ನು ಹುಡುಕುತ್ತಾ ನಮ್ಮ ಜಮೀನಿನ ಬಳಿ ಹೋದಾಗ ಸಂಜೆ 6.00 ಗಂಟೆಯ ಸಮಯದಲ್ಲಿ ನಮ್ಮ ಜಮೀನಿನ ಪಕ್ಕದ ಚೌಡಿಕಟ್ಟೆ ರಮೇಶ ರವರ ಜಮೀನಿನ ಶೆಡ್ಡಿನಲ್ಲಿದ್ದ ಮರದ ಪೋಲ್ಸ್‌ಗೆ ಹಗ್ಗದಿಂದ ಕುತ್ತಿಗೆಗೆ ನೇಣು ಬಿಗಿದ ಸ್ಥಿತಿಯಲ್ಲಿ ನನ್ನ ಮಗ ಕಂಡು ಬಂದಿದ್ದು, ಎರಡು ಕಾಲುಗಳು ಮಂಡಿಯೂರಿದ್ದು ನನ್ನ ಮಗ ಸತ್ತು ಹೋಗಿದ್ದನು. ಈ ದಿನ ದಿನಾಂಕಃ 19.02.2024 ರಂದು ಮಧ್ಯಾಹ್ನ 3.00 ಗಂಟೆಯಲ್ಲಿ ಮುಸ್ಲಿಂ ಹುಡುಗರಾದ ಅಸ್ನೇನ್ ಪಾಷ ಮತ್ತಿತರರು ನನ್ನ ಮಗನ ಮೇಲೆ ಗಲಾಟೆ ಮಾಡಿರುತ್ತಾರೆಂದು ತಿಳಿದು ಬಂದಿರುತ್ತದೆ. ನನ್ನ ಮಗನ ಶವವನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಸಾಗಿಸಿರುತ್ತೇವೆ. ನನ್ನ ಮಗ ಮುತ್ತುರಾಜನ ಸಾವಿನ ಬಗ್ಗೆ ನನಗೆ ಅನುಮಾನವಿದ್ದು ಶವ ಪರೀಕ್ಷೆ ನಡೆಸಿ ತನಿಖೆ ಮಾಡಿ ನನಗೆ ನ್ಯಾಯ ದೊರಕಿಸಿ ಕೊಡಬೇಕೆಂದು ನೀಡಿದ ದೂರನ್ನು ಪಡೆದು ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ಯುಡಿಆರ್.ನಂ.07/2024 ಕಲಂ.174(ಸಿ) ಸಿಆರ್‌ಪಿಸಿ ರಿತ್ಯಾ ಪ್ರಕರಣ ದಾಖಲಿಸಲಾಗಿರುತ್ತದೆ.

ದಿನಾಂಕ:20.02.2024 ರಂದು ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜಿನ ಶವಗಾರದಲ್ಲಿ ಮೃತ ಮುತ್ತುರಾಜುವಿನ ಶವ ಪರೀಕ್ಷೆ ನಡೆಸಿ ಶವವನ್ನು ಮೃತನ ವಾರಸುದಾರರಿಗೆ ಅವರ ಮತಪದ್ಧತಿಯಂತೆ ಅಂತ್ಯ ಸಂಸ್ಕಾರ ಮಾಡಲು ಅವರ ವಶಕ್ಕೆ ನೀಡಲಾಗಿರುತ್ತದೆ.

ನಂತರ ಪಿರ್ಯಾದಿಯವರು ತನ್ನ ಮಗನ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿರುವುದರಿಂದ ಈ ಬಗ್ಗೆ ಕಲಂ.169 ಸಿಆರ್ ಪಿಸಿ ರೀತ್ಯಾ ಅನುಮಾನಿತ ವ್ಯಕ್ತಿಗಳಾದ 1] ಅಸ್ನೇನ್ ಪಾಷ ಬಿನ್ ಲೇಟ್ ಅತೀಕ್ ಪಾಷ, 18 ವರ್ಷ, ದ್ವಿತೀಯ ಪಿಯುಸಿ ವಿದ್ಯಾರ್ಥಿ, 2] ಮಹಮ್ಮದ್ ಖಾಸಿಫ್ ಬಿನ್ ಖಾಲಿದ್ ಅಹಮ್ಮದ್ 19 ವರ್ಷ, ಸರ್ವೀಸ್ ಸ್ಟೇಷನ್ನಿನಲ್ಲಿ ಕೆಲಸ, 3]ಮಹಮ್ಮದ್ ಅನ್ವರ್ ಬಿನ್ ಮಹಮ್ಮದ್ ಅಲಿ, 22 ವರ್ಷ, ಬಿ.ಕಾಂ. ವಿದ್ಯಾರ್ಥಿ, 4] ಸರ್ಫರಾಜ್ ಖಾನ್ ಬಿನ್ ಫೈರೋಜ್ ಖಾನ್, 19 ವರ್ಷ, ಪಾಬ್ರಿಕೇಷನ್ ಕೆಲಸ, 5] ಶಿನಾನ್ ಬಿನ್ ಸಮೀವುಲ್ಲಾ, 19 ವರ್ಷ, ವೆಲ್ಡಿಂಗ್ ಕೆಲಸ, 6] ಸಾಧಿಕ್ ಬಿನ್ ಸೂರುಲ್ಲಾ ಶರೀಫ್, 20 ವರ್ಷ, ಬೇಕರಿಯಲ್ಲಿ ಕೆಲಸ, ಎಲ್ಲರೂ ರತ್ನಾಪುರಿ ಗ್ರಾಮ, ಹುಣಸೂರು ತಾಲ್ಲೂಕು ರವರುಗಳನ್ನು ತನಿಖೆಯ ಸಂಬಂಧ ವಿಚಾರಣೆ ಮಾಡಿದ್ದು ಮೇಲ್ನೋಟಕ್ಕೆ ಖಚಿತ ಮಾಹಿತಿಗಳು ಲಭ್ಯವಾಗಿರುವುದಿಲ್ಲ.

ನಂತರ ವೈದ್ಯರಿಂದ ಮೃತನ ಸಾವಿನ ಬಗ್ಗೆ ತಿಳಿಯಲು ತಾತ್ಕಾಲಿಕ ವೈದ್ಯರ ಅಭಿಪ್ರಾಯ ವರದಿ ಪಡೆದು ಪರಿಶೀಲಿಸಲಾಗಿ "Evidence of asphyxia due to hanging however opinion reserved pending for chemical analysis report" ಎಂಬುದಾಗಿ ನೀಡಿರುತ್ತಾರೆ. ಮೃತ ಶವಪರೀಕ್ಷೆ ಸಮಯದಲ್ಲಿ ಮೃತನ ದೇಹದಲ್ಲಿ ಸಂಗ್ರಹಿಸಿದ ವಿಸ್ರಾವನ್ನು RFSL ಮೈಸೂರಿಗೆ ಪರೀಕ್ಷೆಗಾಗಿ ಕಳುಹಿಸಿ ಕೊಡಲಾಗಿದೆ. ಮೃತನ ಸಾವಿನ ಬಗ್ಗೆ ವೈದ್ಯರ ಅಂತಿಮ ಅಭಿಪ್ರಾಯ ಪಡೆಯಲು ಬಾಕಿ ಇದ್ದು ಪ್ರಕರಣವು ಪ್ರಸ್ತುತ ತನಿಖೆಯಲ್ಲಿರುತ್ತದೆ.

ಹೆಚ್‌ಡಿ 19 ಪಿಸಿಕ್ಯೂ 2024

ಜಿ.ಪರಮೇಶ್ವರ
(ಡಾ:ಜಿ.ಪರಮೇಶ್ವರ)
ಗೃಹ ಸಚಿವರು